**ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ**

ಉಪಸ್ಥಿತರು:- **ಶ್ರೀಮತಿ ಶಾರದಾದೇವಿ ಸಿ. ಹಟ್ಟಿ,**

ಬಿ.ಕಾಂ., ಎಲ್.ಎಲ್.ಬಿ.,(ಸ್ಪೆ)

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.,ಕುಮಟಾ**

ದಿನಾಂಕ **4ನೇ ಮಾರ್ಚ 2017**

**ಅಸಲು ದಾವೆ ಸಂಖ್ಯೆ : 169 / 2016**

**ವಾದಿ**
**(ಅರ್ಜಿದಾರರು)** : 1) ಶ್ರೀ ರಾಮಯ್ಯ ಬಾಬು ಪಟಗಾರ ವಯಸ್ಸು 71 ವರ್ಷ, ಹಿಂದೂ ರೈತ ವಹಿವಾಟದಾರ ಮೊಕ್ತಾರಧಾರ ಶ್ರೀ ಜಯಂತ ರಾಮಯ್ಯ ಪಟಗಾರ, ವಯಸ್ಸು:46, ಕೃಷಿಕ ದಂಧೆ, ವಾಸ್ತವ್ಯ: ಕಾಗಾಲ, ಕುಮಟಾ

2) ಶ್ರೀಮತಿ ಸೀತಾ ತಂದೆ ನಾಗಪ್ಪ ಪಟಗಾರ, ಪತಿ ವೆಂಕು ನಾರಾಯಣ ಪಟಗಾರ, ವಯಸ್ಸು 68 ವರ್ಷ, ಮನೆವಾರ್ತೆ ವ ಕೃಷಿಕ ದಂಧೆ ವಾಸ್ತವ್ಯ:ಕಾಗಾಲ, ಕುಮಟಾ

3) ಶ್ರೀಮತಿ ಕಮಲಾ ಕೋಂ ಬಂಗಾರ ಪಟಗಾರ ವಯಸ್ಸು 60 ವರ್ಷ, ಹಿಂದೂ ಮನೆವಾರ್ತೆ, ಪ್ರತಿನಿಧಿಸುವವರು ಹಾಗೂ ಆಸ್ತಿ ವಹಿವಾಟದಾರ ಅವಳ ಪತಿ ಶ್ರೀಯುತ ಬಂಗಾರ ತಂದೆ ಜಟ್ಟಿ ಪಟಗಾರ ವಯಸ್ಸು 71ವರ್ಷ, ಹಿಂದೂ ಕೃಷಿಕ ದಂಧೆ, ವಾಸ್ತವ್ಯ:ಗುಡೇಅಂಗಡಿ, ತಾ:ಕುಮಟಾ.

**(ಶ್ರೀ ಪಿ.ಎನ್.ಹೆಗಡೆ ವಕೀಲರು)**

**- ವಿರುದ್ಧ -**

**ಪ್ರತಿವಾದಿಯರು**
**(ಎದುರುದಾರರು)** : 1) ಶ್ರೀ ಮಾಧವ ಬಾಬು ಪಟಗಾರ ವಯಸ್ಸು: 78 ವರ್ಷ, ಹಿಂದೂ ಕೃಷಿಕ ದಂದೆ, ವಾಸ್ತವ್ಯ:ಕಾಗಾಲ, ಕುಮಟಾ

2) ಶ್ರೀ ನಾಗೇಶ ಬಾಬು ಪಟಗಾರ,
ವಯಸ್ಸು 62 ವರ್ಷ, ಹಿಂದೂ ಕೃಷಿಕ ದಂದೆ,
ವಾಸ್ತವ್ಯಃ ಕಾಗಾಲ, ಕುಮಟಾ.

3) ಶ್ರೀ ಹಸನ್ ಸಾಬ್ ತಂದೆ ಆದಮ್ ಸಾಬ್ ಲಂಗ್ಡಾ
ವಯಸ್ಸು 65, ಮುಸ್ಲಿಂ ಕೃಷಿಕ ವ ಮೀನುಗಾರಿಕೆ ದಂಧೆ,
ವಾಸ್ತವ್ಯಃಕಾಗಾಲ, ಕುಮಟಾ

**(ಶ್ರೀ ಶ್ರೀನಿವಾಸ ಯು.ಎ. ವಕೀಲರು 1 ಮತ್ತು 2ನೇ ಪ್ರತಿವಾದಿಯರ ಪರವಾಗಿ)**
**(ಶ್ರೀ ಆರ್.ಜಿ.ನಾಯ್ಕ ವಕೀಲರು 3ನೇ ಪ್ರತಿವಾದಿ ಪರವಾಗಿ)**

**ಮಧ್ಯಂತರ ಅರ್ಜಿ ನಂಃ 3ರ ಮೇಲೆ ಆದೇಶ**

ವಾದಿಯರು ಪ್ರತಿವಾದಿಯರ ವಿರುದ್ಧ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೋರಿ ದಾವೆಯನ್ನು ಸಲ್ಲಿಸಿದ್ದಾರೆ.

**2.** ವಾದಿಯರು ಮಧ್ಯಂತರ ಅರ್ಜಿ ನಂ.3 ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39 ನಿಯಮ 1 ಮತ್ತು 2ರಡಿ ಅರ್ಜಿಯನ್ನು ಸಲ್ಲಿಸಿ, ಪ್ರಮಾಣಪತ್ರದಲ್ಲಿ ಹೇಳಿದ ಕಾರಣಗಳಿಗಾಗಿ ದಾವಾ ಆಸ್ತಿಗಳಲ್ಲಿ ಪ್ರತಿವಾದಿಯರು ವಾದಿಯರ ಪೂರ್ವಸಮ್ಮತಿ ಪರವಾನಿಗೆ ಪಡೆಯದೇ ಹೊಸದಾಗಿ ಇಮಾರತು ಕಟ್ಟಡ ಕಾಮಗಾರಿಯನ್ನು ಮುಂದುವರಿಸದಂತೆ ಅಥವಾ ಹೊಸದಾಗಿ ಕಟ್ಟಿದ ಭಾಗದ ಇಮಾರತಿಗೆ ಪಂಚಾಯತಿಯಿಂದ ಪರವಾನಿಗೆ ನಂಬರ ವಗೈರೆ ಪಡೆಯದಂತೆ ದಾವಾ ಪರಿಶಿಷ್ಟದ ಆಸ್ತಿಯಲ್ಲಿ ವಾದಿಯರು ಅನಾದಿಯಿಂದ ತಿರುಗಾಡಿ ಬರುತ್ತಿದ್ದ ದಾರಿಯ ಹಾಗೂ ಓಣಿಯ ದಾರಿ ಹಕ್ಕಿಗೆ ಪ್ರತಿವಾದಿಯರು ಮತ್ತು ಅವರ ಕಡೆಯವರು ಯಾವುದೇ ಅಡ್ಡಿ ಆತಂಕಪಡಿಸದಂತೆ ಅಥವಾ ದಾರಿಯನ್ನು ಕಿರಿದುಗೊಳಿಸದಂತೆ ಕಂದಾಯ ದಾಖಲೆಗಳಲ್ಲಿ ಪ್ರತಿವಾದಿಯರ ಹೆಸರು ದಾಖಲಿಸಿರುವುದರಿಂದ ಅದರ ಗೈರ ಫಾಯಿದೆ ಪಡೆದು ಪ್ರತಿವಾದಿಯರು ದಾವಾ ಅಸ್ತಿಯನ್ನು ಮಾರಾಟ, ಅಡಮಾನ ಅಥವಾ ಇತರ ಯಾವುದೇ ರೀತಿಯಲ್ಲಿ ಪರಭಾರೆ ಮಾಡದಂತೆ ಈ ದಾವಾ ಇತ್ಯರ್ಥವಾಗುವವರೆಗೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ನೀಡಬೇಕೆಂದು ಪ್ರಾರ್ಥಿಸಿದ್ದಾರೆ.

**3. ಅರ್ಜಿಯ ಸಂಕ್ಷಿಪ್ತ ವಿವರಃ-**

ದಾವಾ ಆಸ್ತಿಗಳು ಅವಿಭಕ್ತ ಕುಟುಂಬದ ಆಸ್ತಿಗಳಾಗಿದ್ದು, ದಾವಾ ಆಸ್ತಿಗಳಲ್ಲಿ ಸರಸ ನಿರಸ ವಾಂಟಣಿ ಹಾಗೂ ನಿರ್ಬಂಧಕಾಜ್ಞೆ ಆದೇಶವನ್ನು ಕೋರಿ ದಾವಾ ಸಲ್ಲಿಸಿದ್ದು, ಅರ್ಜಿಯಲ್ಲಿ ನಮೂದಿಸಿದ ಸರ್ವೆ ನಂ. 70/3 ಹಾಗೂ ಸರ್ವೆ ನಂ 70/4 ಗಳಲ್ಲಿ ವಾದಿಯರು ಹಿಂದಿನಿಂದ ಸಾಗುವಳಿ ಮಾಡಿಕೊಂಡು ಬಂದಿದ್ದು, ಸದರಿ ಸ್ಥಳದಲ್ಲಿ ಪ್ರತಿವಾದಿಯರು ವಾದಿಯರ ಪರವಾನಿಗೆ ಪಡೆಯದೇ ಕಾನೂನುಬಾಹಿರವಾಗಿ ಅನಧಿಕೃತವಾಗಿ ಕಟ್ಟಡ ನಿರ್ಮಿಸುತ್ತಿದ್ದು ಆ ಬಗ್ಗೆ ಪ್ರತಿವಾದಿಯರಿಗೆ ತಿಳಿ ಹೇಳಿದಾಗಲೂ ಪ್ರತಿವಾದಿಯರು ಬಲಾತ್ಕಾರದಿಂದ ಕಟ್ಟಡ ಕಾಮಗಾರಿಯನ್ನು ಮುಂದುವರಿಸಿದ್ದಾರೆ. ಪ್ರತಿವಾದಿಯರು ದಾವಾ ಆಸ್ತಿಗಳ ಕಂದಾಯ ದಾಖಲೆಗಳಲ್ಲಿ ಹೆಸರು ನಮೂದಾಗಿರುವ ಗೈರ ಫಾಯಿದೆ ಪಡೆದು ದಾವಾ ಆಸ್ತಿಗಳ ಮಾರಾಟ ಅಡಮಾನ ಅಥವಾ ಇತರ ಯಾವುದೇ ರೀತಿಯಲ್ಲಿ ಪರಭಾರೆ ಮಾಡದಂತೆ ವಾದಿಯರು ಅನಾದಿಯಿಂದ ತಿರುಗಾಡಿ ಬಂದ ದಾರಿಯನ್ನು ಉಪಯೋಗಿಸಲು ಅಡ್ಡಿ ಆತಂಕಪಡಿಸದಂತೆ ಈ ದಾವೆ ಇತ್ಯರ್ಥವಾಗುವವರೆಗೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ನೀಡಬೇಕೆಂದು ಪ್ರಾರ್ಥಿಸಿದ್ದಾರೆ.

4. ನ್ಯಾಯಾಲಯದಿಂದ ಪ್ರತಿವಾದಿಯರಿಗೆ ಸಮನ್ಸ ಕಳಿಸಲಾಗಿ ಪ್ರತಿವಾದಿಯರು ವಕೀಲರ ಮೂಲಕ ಹಾಜರಾಗಿ ಪ್ರತ್ಯೇಕ ಪ್ರತಿವಾದಪತ್ರಗಳನ್ನು ಮತ್ತು ಮಧ್ಯಂತರ ಅರ್ಜಿ ನಂ 3ಕ್ಕೆ 1 ಮತ್ತು 2ನೇ ಪ್ರತಿವಾದಿಯರು ತಕರಾರು ಸಲ್ಲಿಸಿದ್ದಾರೆ. 3ನೇ ಪ್ರತಿವಾದಿ ಪ್ರತಿವಾದಪತ್ರವನ್ನು ಮಾತ್ರ ಸಲ್ಲಿಸಿದ್ದಾರೆ.

**5.** 1 ಮತ್ತು 2ನೇ ಪ್ರತಿವಾದಿಯರು ತಮ್ಮ ಪ್ರತಿವಾದಪತ್ರ, ಮಧ್ಯಂತರ ಅರ್ಜಿಗಳಿಗೆ ತಕರಾರು ಮತ್ತು ಎದುರುದಾವೆಯನ್ನು ಸಲ್ಲಿಸಿದ್ದಾರೆ. ವಾದಪತ್ರ ಮತ್ತು ಅರ್ಜಿಯ ಎಲ್ಲಾ ವಿವರಗಳನ್ನು ಅಲ್ಲಗಳೆದಿರುತ್ತಾರೆ. ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿಗಳಾಗಿದ್ದು ವಾದಿ ಮತ್ತು ಪ್ರತಿವಾದಿಯರು ಸಾಮೂಹಿಕವಾಗಿ ಸಾಗುವಳಿ ಮಾಡುತ್ತಾರೆ ಎನ್ನುವದನ್ನು ಅಲ್ಲಗಳೆದಿರುತ್ತಾರೆ. 1ನೇ ಪ್ರತಿವಾದಿಯು ದಾವಾ ಆಸ್ತಿಗಳನ್ನು ಸ್ವತಂತ್ರ ಮತ್ತು ಪ್ರತ್ಯೇಕವಾಗಿ ಕಬಜಾ

ವಹಿವಾಟು ಮಾಡಿ ಬಂದಂತೆ ಆ ಬಗ್ಗೆ ಭೂ ನ್ಯಾಯ ಮಂಡಳಿಯಿಂದ 1981ರಲ್ಲಿ ಹಿಂದೆ ಮಂಜೂರಾಗಿರುತ್ತವೆ. 1ನೇ ಪ್ರತಿವಾದಿಯು ಮಗಳ ಮದುವೆಯ ಸಲುವಾಗಿ ಹಣಕಾಸಿನ ತೊಂದರೆಯಿಂದಾಗಿ ತನ್ನ ಸ್ವತ್ತನ್ನು 3ನೇ ಪ್ರತಿವಾದಿಗೆ 19 ವರ್ಷಗಳ ಹಿಂದೆ ಮಾರಾಟ ಮಾಡಿರುತ್ತಾನೆ. 1 ಮತ್ತು 2ನೇ ವಾದಿಯರಿಗೆ ಮಂಜೂರಾದ ಆಸ್ತಿಗಳಲ್ಲಿ ಅವರಿಗೆ ಇಷ್ಟ ಬಂದಂತೆ ದಾರಿಯನ್ನು ತೋರಿಸಿಕೊಂಡು 1ನೇ ಪ್ರತಿವಾದಿಯು ಕಟ್ಟುತ್ತಿದ್ದ ಮನೆಯನ್ನು ನಿಲ್ಲಿಸುವ ಉದ್ದೇಶದಿಂದ ಸುಳ್ಳು ದಾವಾ ಸಲ್ಲಿಸಿದ್ದಾರೆ. ಸರ್ವೆ ನಂ 70 ಹಿಸ್ಸಾ 1ರಲ್ಲಿ ಹಾತನಕಾಶೆಯಲ್ಲಿ ತೋರಿಸಿದ ದಾರಿಯು ಅಸ್ತಿತ್ವದಲ್ಲಿರುವುದಿಲ್ಲ, ವಾದಿಯು ವಾದಪತ್ರದಲ್ಲಿ ತೋರಿಸಿದ ಯಾವುದೇ ದಾರಿಗಳು ಅಸ್ತಿತ್ವದಲ್ಲಿ ಇರುವುದಿಲ್ಲ, ವಾದಿಯು ಸಲ್ಲಿಸಿದ ದಾವೆ ಕಾಲ್ಪನಿಕವಾಗಿದ್ದು ಕಾಲಪರಿಮಿತಿ ಮೀರಿ ಸಲ್ಲಿಸಿದ್ದಾಗಿರುತ್ತದೆ. ಸರ್ವೆ ನಂ70/4 1ನೇ ಪ್ರತಿವಾದಿಗೆ ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿದ್ದು ಅದರಲ್ಲಿ ವಾದಿಗೆ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ, 1ನೇ ಪ್ರತಿವಾದಿಯು ತನಗೆ ವಾಸ್ತವ್ಯದ ಇಮಾರತು ಇಲ್ಲದೇ ಇರುವುದರಿಂದ ಹಣ ಖರ್ಚು ಮಾಡಿ ವಾಸ್ತವ್ಯದ ಮನೆ ಕಟ್ಟಿಕೊಂಡು ಅಂತಿಮ ಹಂತದಲ್ಲಿದ್ದಾಗ 1ನೇ ಪ್ರತಿವಾದಿಗೆ ಬುದ್ಧಾಪೂರ್ವಕವಾಗಿ ತೊಂದರೆ ಕೊಡುವ ಉದ್ದೇಶದಿಂದ ದಾವಾ ಸಲ್ಲಿಸಿದ್ದಾರೆ. ಆದ್ದರಿಂದ ಭೂ ನ್ಯಾಯ ಮಂಡಳಿಯ ಆದೇಶದಂತೆ ಸರ್ವೆ ನಂ 70/4 1ನೇ ಪ್ರತಿವಾದಿಗೆ ಮಂಜೂರಾಗಿದ್ದು 1ನೇ ಪ್ರತಿವಾದಿಯು ಕಟ್ಟಿದ ಅಂಗಡಿಯನ್ನು ಆತನ ಪರವಾನಿಗೆಯಂತೆ ನಡೆಸಿ ಬಂದಿರುವುದನ್ನು ವಾದಿಯರು ಅಂಗಡಿಯನ್ನು ಖುಲ್ಲಾಪಡಿಸಿ ಪ್ರತ್ಯಕ್ಷ ಸ್ವಾಧೀನ ಕೊಡಿಸುವಂತೆ ವಾದಿಯರ ವಿರುದ್ದ ಎದುರುದಾವೆಯನ್ನು ಸಲ್ಲಿಸಿದ್ದಾರೆ. ವಾದಿಯರು ಸಲ್ಲಿಸಿದ ದಾವೆ ಸುಳ್ಳು ಮತ್ತು ಕಿರುಕುಳಕಾರಿ ದಾವೆಯಾಗಿದ್ದು ಅದನ್ನು ಖರ್ಚು ಸಹಿತ ವಜಾ ಮಾಡಬೇಕು ಮತ್ತು 1 ಮತ್ತು 2ನೇ ಪ್ರತಿವಾದಿಯರು ಸಲ್ಲಿಸಿದ ಎದುರುದಾವೆಯನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸಿದ್ದಾರೆ.

**6.** ಉಭಯ ಪಕ್ಷಗಾರರ ವಾದವನ್ನು ಆಲಿಸಿ, ಕಡತದಲ್ಲಿ ಲಭ್ಯವಿರುವ ಎಲ್ಲಾ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ್ದೇನೆ.

**7.** ವಾದಿ ಸಲ್ಲಿಸಿದ ಮಧ್ಯಂತರ ಅರ್ಜಿ, ತಕರಾರುಗಳನ್ನು ಪರಿಶೀಲಿಸಲಾಗಿ ನ್ಯಾಯಾಲಯದ ಅವಗಾಹನೆಗಾಗಿ ಈ ಕೆಳಕಂಡ ಅಂಶಗಳು ಉದ್ಭವಿಸುತ್ತವೆ.

1. ವಾದಿಯು ಮೇಲ್ನೋಟಕ್ಕೆ ಸಮ್ಮತ ಎನ್ನಿಸುವ ಪ್ರಕರಣವನ್ನು ಪ್ರತಿಪಾದಿಸಿದ್ದಾರೆಯೆ?
2. ಅನುಕೂಲತೆಯ ಒಲವು ವಾದಿಯ ಪರವಾಗಿದೆಯೆ?
3. ಮಧ್ಯಂತರ ಅರ್ಜಿಯನ್ನು ಪುರಸ್ಕರಿಸದೇ ಇದ್ದಲ್ಲಿ ವಾದಿಗೆ ಭರಿಸಲಾಗದ ಹಾನಿ ಉಂಟಾಗುವುದೇ?
4. ಯಾವ ಆದೇಶ?

**8.** ಮೇಲಿನ ಅಂಶಗಳಿಗೆ ನನ್ನ ಉತ್ತರ ಕೆಳಗಿನಂತಿವೆ.

ಅಂಶ ನಂ.1 ರಿಂದ 3ಃ ನಕಾರಾತ್ಮಕವಾಗಿ
ಅಂಶ ನಂ.4 ಃ ಅಂತಿಮ ಆದೇಶದಂತೆ, ಕೆಳಕಂಡ ಕಾರಣಗಳಿಗಾಗಿ

## **ಕಾರಣಗಳು**

**9.** **ಅಂಶ ನಂ.(1) ರಿಂದ (3)ಗಳಿಗೆಃ** ಈ ಎಲ್ಲಾ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಅವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

**10.** ವಾದಿಯರು ಪ್ರತಿವಾದಿಯರ ವಿರುದ್ದ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೋರಿ ದಾವೆ ಸಲ್ಲಿಸಿದ್ದು. ವಾದಿಯರು ಮತ್ತು ಪ್ರತಿವಾದಿಯರ ಮೂಲ ಪುರುಷ ರಾಮಯ್ಯ ಪಟಗಾರ ಹಾಗೂ ಅವನ ಹೆಂಡತಿ ಬಹಳ ದಿನಗಳ ಹಿಂದೆಯೇ ಮೃತಪಟ್ಟಿರುತ್ತಾರೆ. ಅವರ ಮಕ್ಕಳಾದ ಬಾಬು ಮತ್ತು ನಾಗಪ್ಪ ಮತ್ತು ಅವರ ಪತ್ನಿಯರು ಸಹ ಮೃತಪಟ್ಟಿರುತ್ತಾರೆ. ಬಾಬು ಪಟಗಾರ ಹಾಗೂ ನಾಗಪ್ಪ ಪಟಗಾರ ರವರ ಮಕ್ಕಳು ಈ ಪ್ರಕರಣದಲ್ಲಿ ವಾದಿ ಪ್ರತಿವಾದಿಯರಿದ್ದು ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿಯರ ಅವಿಭಕ್ತ ಕುಟುಂಬದ ಆಸ್ತಿಗಳಾಗಿದ್ದು, ಈವರೆಗೂ ಸರಸ ನಿರಸ ವಾಂಟಣಿಯಾಗಿರುವುದಿಲ್ಲ, ಕಾಗಾಲ ಗ್ರಾಮದ ಸರ್ವೆ ನಂ 70/3ರಲ್ಲಿ ವಾದಿ ಮತ್ತು ಪ್ರತಿವಾದಿಯರು ವಾಸ್ತವ್ಯ ಮಾಡಿ ಬಂದಿದ್ದು ಸರ್ವೆ ನಂ70ರಲ್ಲಿ ಬೇರೆ ಬೇರೆ ಹಿಸ್ಸಾಗಳು ಇದ್ದು ಅವುಗಳನ್ನು ದಾವಾ ಹಾತನಕಾಶೆಯಲ್ಲಿ ತೋರಿಸಿರುತ್ತದೆ. 1ನೇ ಪ್ರತಿವಾದಿಯು ಬಾಬು ಪಟಗಾರನ ಹಿರಿಯ ಮಗನಾಗಿದ್ದು

ಕುಟುಂಬದ ಉತ್ಪನ್ನದಿಂದಲೇ ಹೆಚ್ಚಿಗೆ ಓದು ಬರಹ ಕಲಿತು ಕುಟುಂಬದ ಆಸ್ತಿಗಳಲ್ಲಿ ಒಳ್ಳೆಯ ಉತ್ಪನ್ನ ಬರುವ ಜಮೀನುಗಳನ್ನು ವಾದಿಯರ ಗಮನಕ್ಕೆ ಬರದಂತೆ ಕಾನೂನುಬಾಹಿರವಾಗಿ ತನ್ನ ಹೆಸರಿಗೆ ದಾಖಲಿಸಿಕೊಂಡಿದ್ದಾನೆ. 1ನೇ ಪ್ರತಿವಾದಿಯು ಕಾಗಾಲ ಗ್ರಾಮದ ಸರ್ವೆ ನಂ 578ರಲ್ಲಿ ವಾದಿಯರ ಪರವಾನಿಗೆ ಪಡೆಯದೇ 3ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾನೆ. ಸದರಿ ಸ್ವತ್ತಿನಲ್ಲಿ ವಾದಿಗೆ 1/3 ಭಾಗಾಂಶದ ಹಕ್ಕು ಇದ್ದು ಸದರಿ ಮಾರಾಟವು ವಾದಿಯರಿಗೆ ಬಂಧನಕಾರಿಯಾಗಿರುವುದಿಲ್ಲ. 1ನೇ ಪ್ರತಿವಾದಿಯು ವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಪಂಚಾಯತಿಯಿಂದ ಪರವಾನಿಗೆ ಪಡೆಯದೇ ಕಟ್ಟಡ ಕಾಮಗಾರಿಯನ್ನು ಮುಂದುವರಿಸಿದ್ದಾನೆ ಮತ್ತು ದಾವಾ ಹಾತನಕಾಶೆಯಲ್ಲಿ ತೋರಿಸಿದಂತೆ ವಾದಿಯರಿಗೆ ಅವಿಭಕ್ತ ಕುಟುಂಬದ ಸ್ವತ್ತುಗಳಿಗೆ ಓಡಾಡಲು ದಾರಿಯನ್ನು ಬಂದ ಮಾಡಿ ತೊಂದರೆ ಮಾಡುತ್ತಿದ್ದಾನೆ. ಆದ್ದರಿಂದ ಈ ದಾವಾ ಇತ್ಯರ್ಥವಾಗುವವರೆಗೆ ಪ್ರತಿವಾದಿಯರು ಕಟ್ಟಡ ನಿರ್ಮಾಣ ಮುಂದುವರೆಸದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ನೀಡಬೇಕೆಂದು ಪ್ರಾರ್ಥಿಸಿದ್ದಾರೆ.

**11.** 1ನೇ ಪ್ರತಿವಾದಿ ತಮ್ಮ ವಕೀಲರ ಮೂಲಕ ಹಾಜರಾಗಿ ಪ್ರತಿವಾದಪತ್ರ ಮತ್ತು ಎದುರುದಾವೆಯನ್ನು ಸಲ್ಲಿಸಿ, ವಾದಪತ್ರದ ಎಲ್ಲಾ ವಿವರಗಳನ್ನು ಅಲ್ಲಗಳೆದಿರುತ್ತಾರೆ. ವಾದಿಯ ದಾವೆಗೆ ಯಾವುದೇ ವ್ಯಾಜ್ಯ ಕಾರಣ ಉಂಟಾಗಿರುವುದಿಲ್ಲ. 1ನೇ ಪ್ರತಿವಾದಿಯು ತನ್ನ ಸ್ವತ್ತನ್ನು 19 ವರ್ಷಗಳ ಹಿಂದೆ ಮಾರಾಟ ಮಾಡಿದ್ದು ಅದರಲ್ಲಿಯೂ ಸಹ ವಾಸ್ತವಿಕತೆಗೆ ವಿರುದ್ಧವಾಗಿ ಪರಿಹಾರ ಕೇಳಿದ್ದು ದಾವೆಯನ್ನು ಪುರಸ್ಕರಿಸಲು ಬರುವುದಿಲ್ಲ. ಸರ್ವೆ ನಂ 70/4 1ನೇ ಪ್ರತಿವಾದಿಗೆ ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿದ್ದು ವಾದಿಯರಿಗೆ ಸದರಿ ಸ್ವತ್ತಿನಲ್ಲಿ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ. ವಾದಿಯರು ದಾರಿಯ ಬಗ್ಗೆ ತಾವೇ ಪುರಾವೆ ಮಾಡಬೇಕಾಗುತ್ತದೆ. 1ನೇ ಪ್ರತಿವಾದಿಯು ತಮಗೆ ವಾಸ್ತವ್ಯದ ಮನೆ ಬೇಕೆಂದು ಸಾಕಷ್ಟು ಹಣ ಖರ್ಚು ಮಾಡಿಕೊಂಡು ಮನೆ ನಿರ್ಮಿಸಿದ್ದಾನೆ. ಮನೆಯು ಮುಕ್ತಾಯ ಹಂತದಲ್ಲಿದ್ದಾಗ 1ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವಾ ಸಲ್ಲಿಸಿದ್ದಾರೆ. 1ನೇ ಪ್ರತಿವಾದಿಯು ಯಾವತ್ತೂ ಕುಟುಂಬದ ಮೆನೆಜರ ಆಗಿರುವುದಿಲ್ಲ ಮತ್ತು ಕುಟುಂಬದ ಉತ್ಪನ್ನವನ್ನು ಕೇಳುವ ಪ್ರಮೇಯ ಉದ್ಭವವಾಗುವುದಿಲ್ಲ. ಸರ್ವೆ ನಂ. 70/4ರಲ್ಲಿ 1ನೇ

ಪ್ರತಿವಾದಿಗೆ ಭೂ ನ್ಯಾಯ ಮಂಡಳಿಯಿಂದ ಮಂಜೂರಾದ ಸ್ಥಳದಲ್ಲಿ 1ನೇ ಪ್ರತಿವಾದಿ ಕಟ್ಟಿದ ಅಂಗಡಿಯನ್ನು ಆತನ ಪರವಾನಿಗೆಯಂತೆ ವಾದಿಯರು ನಡೆಸಿ ಬಂದಿದ್ದನ್ನು ಸದರಿ ಅಂಗಡಿಯನ್ನು ವಾದಿಯರು ಖುಲ್ಲಾಪಡಿಸಿ 1ನೇ ಪ್ರತಿವಾದಿಯ ಸ್ವಾಧೀನಕ್ಕೆ ಬಿಟ್ಟು ಕೊಡಬೇಕೆಂದು ಎದುರುದಾವೆ ಸಲ್ಲಿಸಿದ್ದಾರೆ. ವಾದಿಯರು ಸಲ್ಲಿಸಿದ ದಾವೆಯನ್ನು ಖರ್ಚುಸಹಿತ ವಜಾಗೊಳಿಸಬೇಕು ಮತ್ತು ಎದುರುದಾವೆಯನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸಿದ್ದಾರೆ.

**12.** ವಾದಿ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ವಾದಿ ಮತ್ತು ಪ್ರತಿವಾದಿಯರು ಒಟ್ಟು ಕುಟುಂಬದ ಸದಸ್ಯರಾಗಿದ್ದು ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿದ್ದು 1ನೇ ಪ್ರತಿವಾದಿಯು ಕುಟುಂಬದ ಕರ್ತನಾಗಿ ವಾದಿಯರ ಗಮನಕ್ಕೆ ಬರದಂತೆ ಒಳ್ಳೆಯ ಜಮೀನುಗಳನ್ನು ತನ್ನ ಹೆಸರಿಗೆ ಖಾತಾ ವರ್ಗಾವಣೆ ಮಾಡಿಕೊಂಡಿದ್ದಾನೆ ಮತ್ತು 3ನೇ ಪ್ರತಿವಾದಿಗೆ ಒಟ್ಟು ಕುಟುಂಬದ ಸ್ವತ್ತನ್ನು ವಾದಿಯರ ಸಮ್ಮತಿ ಪಡೆಯದೇ ಮಾರಾಟ ಮಾಡಿರುವುದು ವಾದಿಯರಿಗೆ ಬಂಧನಕಾರಿಯಾಗಿರುವುದಿಲ್ಲ, 1ನೇ ಪ್ರತಿವಾದಿಯು ದಾವಾ ಆಸ್ತಿಗಳಲ್ಲಿ ಪಂಚಾಯತಿಯಿಂದ ಪರವಾನಿಗೆ ಪಡೆಯದೇ ಆಕ್ರಮವಾಗಿ ವಾದಿಯರಿಗಿದ್ದ ದಾರಿ ಹಕ್ಕನ್ನು ಬಂದ ಮಾಡಿ ಮನೆ ನಿರ್ಮಿಸುತ್ತಿದ್ದಾನೆ. ಆದ್ದರಿಂದ 1ನೇ ಪ್ರತಿವಾದಿಯು ಮನೆ ನಿರ್ಮಿಸದಂತೆ ಹಾಗೂ ದಾವಾ ಸ್ವತ್ತುಗಳಲ್ಲಿ ಪ್ರತಿವಾದಿಯರಿಗೆ ಓಡಾಡಲು ದಾರಿ ಬಂದ ಮಾಡದಂತೆ ಶಾಶ್ವತ ನಿರ್ಬಂಧಕಾಜ್ಞೆಯನ್ನು ನೀಡಬೇಕು. ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಭಾಗಾಂಶದ ಹಕ್ಕನ್ನು ಪಡೆಯಲು ಅರ್ಹರಿದ್ದಾರೆಂದು ನಿರ್ಣಯಿಸಬೇಕೆಂದು ಪ್ರಾರ್ಥಿಸಿದ್ದಾರೆ.

**13.** ಪ್ರತಿವಾದಿ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ ವಾದಿ ಮತ್ತು ಪ್ರತಿವಾದಿಯರು ಅವಿಭಕ್ತ ಕುಟುಂಬದ ಸದಸ್ಯರಾಗಿರುವುದಿಲ್ಲ, ದಾವಾ ಆಸ್ತಿಗಳು ಅವಿಭಕ್ತ ಕುಟುಂಬದ ಆಸ್ತಿಗಳಾಗಿರುವುದಿಲ್ಲ, ವಾದಿ ಮತ್ತು ಪ್ರತಿವಾದಿಯರು ಪ್ರತ್ಯೇಕವಾಗಿ ಸಾಗುವಳಿ ಮಾಡಿಕೊಂಡು ಬಂದ ಸ್ವತ್ತುಗಳಿಗೆ ಪ್ರತ್‌ಪ್ರತ್ಯೇಕವಾಗಿ ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿದ್ದು ಆ ಮೇರೆಗೆ ಭೂ ನ್ಯಾಯ ಮಂಡಳಿಯವರು ವಾದಿ ಮತ್ತು ಪ್ರತಿವಾದಿಯರಿಗೆ ಪ್ರತ್ ಪ್ರತ್ಯೇಕವಾಗಿ ಅವರು

ಸ್ವಾಧೀನದಲ್ಲಿದ್ದ ಸ್ಥಳಗಳನ್ನು ಮಂಜೂರು ಮಾಡಿರುತ್ತಾರೆ. ಆ ಮೇರೆಗೆ ವಾದಿ ಮತ್ತು ಪ್ರತಿವಾದಿಯರು ತಮ್ಮ ತಮ್ಮ ಸ್ಥಳಗಳಲ್ಲಿ ಪ್ರತ್ಯೇಕವಾಗಿ ಸ್ವಾಧೀನಾನುಭವದಲ್ಲಿದ್ದಾರೆ. 1ನೇ ಪ್ರತಿವಾದಿಯು ತನ್ನ ಮಾಲಿಕತ್ವಕ್ಕೆ ಒಳಪಟ್ಟ ಜಮೀನನ್ನು 19 ವರ್ಷಗಳ ಹಿಂದೆ ಮಾರಾಟ ಮಾಡಿದ್ದು ಸದರಿ ಸ್ವತ್ತನ್ನು ಸೇರಿಸಿ ವಾದಿಯರು ದಾವಾ ಸಲ್ಲಿಸಿರುವುದರಿಂದ ದಾವೆಗೆ ಕಾಲ ಪರಿಮಿತಿ ಮೀರಿ ಸಲ್ಲಿಸಿದ್ದಾಗಿರುತ್ತದೆ. ವಾದಿಯರು ತಮ್ಮ ಸ್ಥಳಗಳಲ್ಲಿ ಪ್ರತ್ಯೇಕವಾಗಿ ಮನೆ ನಿರ್ಮಿಸಿಕೊಂಡು ವಾಸ್ತವ್ಯ ಮಾಡಿಕೊಂಡಿದ್ದಾರೆ. ಅದೇ ರೀತಿ 1ನೇ ಪ್ರತಿವಾದಿಯು ತನ್ನ ಸ್ಥಳದಲ್ಲಿ ಪಂಚಾಯತಿಯಿಂದ ಪರವಾನಿಗೆ ಪಡೆದು ಮನೆ ನಿರ್ಮಿಸಿಕೊಂಡಿದ್ದು ಮನೆ ನಿರ್ಮಾಣ ಅಂತಿಮ ಹಂತದಲ್ಲಿದ್ದಾಗ 1ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವಾ ಸಲ್ಲಿಸಿದ್ದಾರೆ. ವಾದಿ ಮತ್ತು ಪ್ರತಿವಾದಿಯರಿಗೆ ದಾವಾ ಆಸ್ತಿಗಳನ್ನು ಪ್ರತ್ ಪ್ರತ್ಯೇಕವಾಗಿ ಭೂ ನ್ಯಾಯ ಮಂಡಳಿಯಿಂದ ಮಂಜೂರಾದ ಬಗ್ಗೆ ಕಂದಾಯ ದಾಖಲೆಗಳಲ್ಲಿ ನಮೂದಾಗಿದ್ದು ಎಲ್ಲಾ ವಾಸ್ತವಾಂಶಗಳನ್ನು ಮರೆಮಾಚಿ ಸುಳ್ಳು ದಾವಾ ಸಲ್ಲಿಸಿದ್ದಾರೆ. ಆದ್ದರಿಂದ ವಾದಿಯರು ಸಲ್ಲಿಸಿದ ದಾವೆಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿದ್ದಾರೆ.

**14.** ವಾದಿಯರ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ವಾದಿ ಮತ್ತು ಪ್ರತಿವಾದಿಯರು ಅವಿಭಕ್ತ ಕುಟುಂಬದ ಸದಸ್ಯರು. ದಾವಾ ಆಸ್ತಿಗಳು ಅವಿಭಕ್ತ ಕುಟುಂಬದ ಆಸ್ತಿಗಳಾಗಿದ್ದು ಸ್ವಾಧೀನಾನುಭವದಲ್ಲಿವೆ ಎಂದು ವಾದಿಯರು ದಾವೆ ಸಲ್ಲಿಸಿದಾಗ ಪ್ರತಿವಾದಿಯರು ಸದರಿ ಸಂಗತಿಯನ್ನು ಅಲ್ಲಗಳೆದಾಗ ಅದನ್ನು ರುಜುವಾತಿನ ಭಾರ ಪ್ರತಿವಾದಿಯರ ಮೇಲೆ ಇರುತ್ತದೆ ಎಂದು ಹೇಳಿದ್ದಾರೆ. ಆ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯದ ತೀರ್ಪುಗಳನ್ನು ಹಾಜರಪಡಿಸಿದ್ದಾರೆ. ಅವು ಈ ಕೆಳಗಿನಂತಿದೆ.

***Civil Appeal No.5054 –55 /1991 S.C. 73***
***Dalpat Kumar & Anr. Vs. Prahlad Singh & Ors.***

**(i) Civil Procedure Code, 1908-Oder 39 Rules 1 & 2 –Grant of temporary injunction against dispossession-Nature of factors to be taken in to**

**account-Meaning of prima facie case-Irreparable loss and Balance of convenience explained.**

**ILR 2004 KAR 3355**
**N.Kumar J.**

**Sri Parushuram Nemani Kuduchakar &Ors. Vs.Smt.Shantabai Ramachandra Kuduchakar & Ors.**

**(A) KARNATAKA LAND REFORMS ACT, 1961- SECTIONS 12(B), 48a,132,133 CIVIL PROCEDURE CODE, 1908- SECTION 92(2) –Reference to 3rd Judge on differing of views by Division Bench on question of law. Tenanted Agricultural lands-Whether in appeal appellant can be permitted to urge the contention that the suit for partition in respect of tenanted agricultural lands is barred in view of the order of the Land Tribunal-HELD- As a suit for partition in respect of tenanted agricultural lands is not barred and it is the Civil Court alone which has jurisdiction to entertain a suit for partition, as such the plea that the suit is barred in view of the order of the Land Tribunal, has no substance and cannot be permitted."**

**15.** ಪ್ರತಿವಾದಿ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ ವಾದಿ ಮತ್ತು ಪ್ರತಿವಾದಿಯರು ತಾವು ಸಾಗುವಳಿ ಮಾಡುತ್ತಿದ್ದ ಸ್ಥಳಗಳನ್ನು ಮಂಜೂರಿ ಮಾಡಿಕೊಡಬೇಕೆಂದು ಪ್ರತ್‌ಪ್ರತ್ಯೇಕವಾಗಿ ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿದ್ದು ಭೂ ನ್ಯಾಯ ಮಂಡಳಿಯವರು

ವಾದಿ ಪ್ರತಿವಾದಿಯರ ಅರ್ಜಿಗಳನ್ನು ವಿಚಾರಣೆ ಮಾಡಿ ವಾದಿ ಮತ್ತು ಪ್ರತಿವಾದಿಯರಿಗೆ ಪ್ರತ್ಯೇಕವಾಗಿ ದಾವಾ ಆಸ್ತಿಗಳನ್ನು ಮಂಜೂರು ಮಾಡಿದ್ದಾರೆಂದು ಕುಮಟಾ ಭೂ ನ್ಯಾಯ ಮಂಡಳಿಯ ಆದೇಶದ ಪ್ರತಿಯನ್ನು ಹಾಜರಪಡಿಸಿದ್ದು ಸದರಿ ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿಯರಿಗೆ ಪ್ರತ್ ಪ್ರತ್ಯೇಕವಾಗಿ ಮಂಜೂರಾಗಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಆದ್ದರಿಂದ ವಾದಿಯರು ಪ್ರತಿವಾದಿಯರ ವಿರುದ್ದ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೇಳಲು ಬರುವುದಿಲ್ಲವೆಂದು ಮಾನ್ಯ ಘನ ಉಚ್ಚ ನ್ಯಾಯಾಲಯದ ತೀರ್ಪನ್ನು ಹಾಜರಪಡಿಸಿದ್ದಾರೆ.

***2007 STPL 13017 Karnataka.***
***K.S.Basavarajappa and another Vs. Veerabhadrappa***

***2014 STPL 8477 Allahabad***
***Babu Ram Vs. Daya Ram***

***AIR 1994 SC 1190=(1994) 2 SCC 57***
***Mudakappa Vs. Rudrappa and others.***

***AIR 1976 SC 1 =(1976) SCC 214-1976(1) SCR 863***
***Ratnam Chettiar and others Vs. S.M.Kuppuswami Chettiar and others.***

**16.** ಪ್ರತಿವಾದಿ ಪರ ವಕೀಲರು ಕುಟುಂಬದಲ್ಲಿ ವಿಭಾಗವಾದ ಬಗ್ಗೆ ಕಂದಾಯ ದಾಖಲೆಗಳಲ್ಲಿ ನಮೂದಾಗಿದ್ದು ವಾದಿ ಮತ್ತು ಪ್ರತಿವಾದಿಯರು ಸ್ವತ್ತುಗಳನ್ನು ಒಡೆಯರ ಕೆಳಗೆ ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಾ ಬಂದಿದ್ದು ತಮ್ಮ ತಮ್ಮ ಸ್ವಾಧೀನದಲ್ಲಿರುವ ಸ್ವತ್ತುಗಳಿಗೆ ಸಂಬಂಧಪಟ್ಟಂತೆ

ವಾದಿ ಮತ್ತು ಪ್ರತಿವಾದಿಯರು ಭೂ ನ್ಯಾಯ ಮಂಡಳಿಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿದ್ದು ಆ ಮೇರೆಗೆ ಭೂ ನ್ಯಾಯ ಮಂಡಳಿಯವರು ಎಲ್ಲಾ ಅರ್ಜಿಗಳನ್ನು ಸೇರಿಸಿ ದಿನಾಂಕಃ22-10-1981 ರಂದು ವಾದಿ ಮತ್ತು ಪ್ರತಿವಾದಿಯರಿಗೆ ಅವರವರ ಸ್ವಾಧೀನದಲ್ಲಿರುವ ಸ್ಥಳಗಳನ್ನು ಅವರವರಿಗೆ ಪ್ರತ್ಯೇಕವಾಗಿ ಮಂಜೂರು ಮಾಡಿದ್ದಾರೆ. ಸದರಿ ಭೂ ನ್ಯಾಯ ಮಂಡಳಿಯ ಆದೇಶವನ್ನು ವಾದಿಯರು ಇಲ್ಲಿಯವರೆಗೆ ಪ್ರಶ್ನಿಸಿರುವುದಿಲ. ಆದ್ದರಿಂದ ಸದರಿ ಭೂ ನ್ಯಾಯ ಮಂಡಳಿಯ ಆದೇಶ ವಾದಿ ಮತ್ತು ಪ್ರತಿವಾದಿಯರಿಗೆ ಬಂಧನಕಾರಿಯಾಗಿರುತ್ತದೆ. ಆದ್ದರಿಂದ ಮೇಲೆ ಮಾನ್ಯ ಘನ ಉಚ್ಚ ನ್ಯಾಯಾಲಯದ ತೀರ್ಪಿನ ತತ್ವಗಳು ಈ ದಾವೆಗೆ ಅನ್ವಯವಾಗುವುದರಿಂದ ವಾದಿಯರು ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹರಿರುವುದಿಲ್ಲ. ಆದ್ದರಿಂದ ವಾದಿಯರು ಸಲ್ಲಿಸಿದ ಮಧ್ಯಂತರ ಅರ್ಜಿಯನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು ಪ್ರಾರ್ಥಿಸಿದ್ದಾರೆ.

**17.** ವಾದಿ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ಭೂ ನ್ಯಾಯ ಮಂಡಳಿಯವರು ಆದೇಶದಲ್ಲಿ ವಾದಿ ಮತ್ತು ಪ್ರತಿವಾದಿಯರಿಗೆ ಭಾಗಾಂಶ ಮಾಡಿರುವುದು ನ್ಯಾಯಸಮ್ಮತವಾಗಿರುವುದಿಲ್ಲ. ಕರ್ನಾಟಕ ಭೂ ಸುಧಾರಣಾ ಕಾಯಿದೆ ಅಡಿ ಭೂ ನ್ಯಾಯ ಮಂಡಳಿಗೆ ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೊಡಿಸುವ ಅಧಿಕಾರ ಇರುವುದಿಲ್ಲ. ಆದ್ದರಿಂದ ದಾವಾ ಅಸ್ತಿಗಳನ್ನು ವಾದಿ ಮತ್ತು ಪ್ರತಿವಾದಿಯರಿಗೆ ವಿಂಗಡಿಸಿರುವುದು ನ್ಯಾಯಸಮ್ಮತವಾಗಿರುವುದಿಲ್ಲ. ಆದ್ದರಿಂದ ದಾವಾ ಅಸ್ತಿಗಳು ವಾದಿ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿಗಳಾಗಿದ್ದು ವಾದಿ ಮತ್ತು ಪ್ರತಿವಾದಿಯರಿಗೆ ಅಂಶವಾರಿ ಹಕ್ಕು ಇರುವುದರಿಂದ ಪ್ರತಿವಾದಿಯರಿಗೆ ದಾವಾ ಆಸ್ತಿಗಳನ್ನು ಮಾರಾಟ ಮಾಡುವ ಅಥವಾ ವಾದಿಯರಿಗೆ ದಾರಿ ಹಕ್ಕನ್ನು ಬಂದ ಮಾಡಲು ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ. ಅದ್ದರಿಂದ ವಾದಿಯರು ಹಾಜರಪಡಿಸಿದ ಮಾನ್ಯ ಘನ ಸರ್ವೋಚ್ಚ ಮತ್ತು ಉಚ್ಚ ನ್ಯಾಯಾಲಯದ ತೀರ್ಪಿನ ತತ್ವಗಳು ಈ ದಾವೆಗೆ ಅನ್ವಯವಾಗುವುದರಿಂದ ಈ ದಾವೆ ಇತ್ಯರ್ಥವಾಗುವವರೆಗೆ 1ನೇ ಪ್ರತಿವಾದಿಯು ದಾವಾ ಆಸ್ತಿಯಲ್ಲಿ ಮನೆ ಕಟ್ಟಡ ಕಾಮಗಾರಿಯನ್ನು ಮುಂದುವರಿಸದಂತೆ ಹಾಗೂ ಒಟ್ಟು ಕುಟುಂಬದ ಆಸ್ತಿಗಳಿಗೆ ಹೋಗಿ ಬರಲು ದಾರಿ ಹಕ್ಕನ್ನು ಬಂದ

ಮಾಡದಂತೆ, 1ನೇ ಪ್ರತಿವಾದಿ ಕಟ್ಟಿದ ಮನೆಗೆ ಪಂಚಾಯತಿಯವರು ನಂಬರ ಕೊಡದಂತೆ, 1ನೇ ಪ್ರತಿವಾದಿಯು ಕಂದಾಯ ದಾಖಲೆಗಳಲ್ಲಿ ಹೆಸರು ಇರುವುದನ್ನು ದುರುಪಯೋಗಪಡಿಸಿಕೊಂಡು ಬೇರೆಯವರಿಗೆ ಮಾರಾಟ, ಅಡಮಾನ ಅಥವಾ ಇತರೇ ಯಾವುದೇ ರೀತಿಯಲ್ಲಿ ಪರಭಾರೆ ಮಾಡದಂತೆ ಈ ದಾವೆ ಇತ್ಯರ್ಥವಾಗುವವರೆಗೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ನೀಡಬೇಕೆಂದು ಪ್ರಾರ್ಥಿಸಿದ್ದಾರೆ.

**18.** ಸಿವಿಲ್ ಪ್ರಕ್ರಿಯಾ ನಿಯಮದಲ್ಲಿ ಒಂದು ಪರಿಹಾರಕ್ಕೆ ಒಂದು ಅರ್ಜಿಯನ್ನು ಸಲ್ಲಿಸಲೇ ಬೇಕೆಂದು ಕಡ್ಡಾಯವಾಗಿರುವುದರಿಂದ ವಾದಿಯರು ನಾಲ್ಕಕ್ಕಿಂತ ಹೆಚ್ಚು ಪರಿಹಾರಗಳನ್ನು ಒಂದೇ ಅರ್ಜಿಯಲ್ಲಿ ಕೋರಿದ್ದಾರೆ. ವಾದಿ ಮತ್ತು ಪ್ರತಿವಾದಿಯರು ಒಟ್ಟು ಕುಟುಂಬದ ಸದಸ್ಯರಾಗಿದ್ದು ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳೆಂದು ಹೇಳಿದ್ದಾರೆ. ಆದರೆ ಪ್ರತಿವಾದಿ ಹಾಜರಪಡಿಸಿದ ಭೂ ನ್ಯಾಯ ಮಂಡಳಿಯ ಆದೇಶವನ್ನು ಪರಿಶೀಲಿಸಲಾಗಿ “ **ವಾದಿ ಮತ್ತು ಪ್ರತಿವಾದಿಯರು ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು ಅವರೆಲ್ಲರೂ 4 ರಿಂದ 6 ವರ್ಷಗಳ ಹಿಂದೆ ತಮ್ಮ ತಮ್ಮಲ್ಲಿ ವಿಭಾಗ ಮಾಡಿಕೊಂಡು ಪ್ರತ್ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಿದ್ದರಿಂದ ಕುಟುಂಬದ ಆಸ್ತಿಗಳನ್ನು ಅರ್ಜಿಯಲ್ಲಿ ಹೇಳಿದಂತೆ ವಿಂಗಡಿಸಿಕೊಂಡಿದ್ದರಿಂದ ಅವರವರ ಹೆಸರಿಗೆ ಪ್ರತ್ಯೇಕವಾಗಿ ಅನುಭವದಾರ ಎಂದು ನೋಂದಾಯಿಸಿಕೊಳ್ಳಲು ಹೇಳಿ**” ಅರ್ಜಿ ಸಲ್ಲಿಸಿದ ಮೇರೆಗೆ ಭೂ ನ್ಯಾಯ ಮಂಡಳಿಯವರು ವಾದಿ ಮತ್ತು ಪ್ರತಿವಾದಿಯರ ಅರ್ಜಿಗಳನ್ನು ಪರಿಶೀಲಿಸಿ ದಿಃ22-10-1981 ರಂದು ದಾವಾ ಆಸ್ತಿಗಳನ್ನು ವಾದಿ ಮತ್ತು ಪ್ರತಿವಾದಿಯರಿಗೆ ಪ್ರತ್ ಪ್ರತ್ಯೇಕವಾಗಿ ಮಂಜೂರು ಮಾಡಿ ಅನುಭವದಾರರೆಂದು ಆದೇಶ ಮಾಡಿದ್ದಾರೆ. ಆ ಬಗ್ಗೆ ಭೂ ನ್ಯಾಯ ಮಂಡಳಿಯ ಆದೇಶದಲ್ಲಿ ಸ್ಪಷ್ಟವಾಗಿರುವುದರಿಂದ ಸದರಿ ಆದೇಶವನ್ನು ವಾದಿಯರು ಈವರೆಗೂ ಪ್ರಶ್ನಿಸದೇ ಇರುವುದರಿಂದ ಭೂ ನ್ಯಾಯ ಮಂಡಳಿಯ ಆದೇಶವು ವಾದಿ ಮತ್ತು ಪ್ರತಿವಾದಿಯರಿಗೆ ಬಂಧನಕಾರಿಯಾಗಿರುವುದರಿಂದ ವಾದಿ ಪರ ವಕೀಲರು ಮೇಲೆ ಹಾಜರಪಡಿಸಿದ ಸರ್ವೋಚ್ಚ ಮತ್ತು ಉಚ್ಚ ನ್ಯಾಯಾಲಯದ ತೀರ್ಪಿನ ತತ್ವಗಳು ಈ ದಾವೆಗೆ ಅನ್ವಯವಾಗುವುದಿಲ್ಲ.

**19.** ಭೂ ನ್ಯಾಯ ಮಂಡಳಿಯ ಆದೇಶದಲ್ಲಿ ವಾದಿ ಮತ್ತು ಪ್ರತಿವಾದಿಯರಿಗೆ ದಾವಾ ಆಸ್ತಿಗಳಲ್ಲಿ ಪ್ರತ್ಯೇಕವಾಗಿ ಅನುಭವದಾರ ಎಂದು ಆದೇಶವಾಗಿರುತ್ತದೆ. ವಾದಿಯು ತಮ್ಮ ದಾವೆಯಲ್ಲಿ 1ನೇ ಪ್ರತಿವಾದಿ ಸರ್ವೆ ನಂ 70/3, 70/4ರಲ್ಲಿ ಅನಧಿಕೃತವಾಗಿ ಕಟ್ಟಡ ನಿರ್ಮಿಸುತ್ತಿದ್ದಾರೆಂದು ಹೇಳಿದ್ದಾರೆ. ಭೂ ನ್ಯಾಯ ಮಂಡಳಿಯ ಆದೇಶವನ್ನು ಪರಿಶೀಲಿಸಲಾಗಿ 1ನೇ ಪ್ರತಿವಾದಿಗೆ ಸರ್ವೆ ನಂ.70/4ರಲ್ಲಿ 4 ಗುಂಟಾ 8 ಆಣೆ 2ನೇ ಪ್ರತಿವಾದಿಗೆ ಹೊಂದಿಕೊಂಡು ಉತ್ತರದ ಕಡೆಗೆ 1ನೇ ಪ್ರತಿವಾದಿಯ ಸ್ಥಳ ಇರುವುದಾಗಿ ಕಂಡು ಬರುತ್ತದೆ. ಅದೇ ರೀತಿ ಸರ್ವೆ ನಂ. 70/3ರಲ್ಲಿ 11 ಗುಂಟಾ ಸ್ಥಳದಲ್ಲಿ ವಾದಿ ಮತ್ತು 1 ಮತ್ತು 2ನೇ ಪ್ರತಿವಾದಿ ತಲಾ 1/4 ಭಾಗಾಂಶದ ಹಕ್ಕು ಇದ್ದು, 1ನೇ ಪ್ರತಿವಾದಿಗೆ ಉತ್ತರದ ಕಡೆಗೆ 1/4 ಭಾಗಾಂಶ ಎಂದು ನಮೂದಾಗಿರುವುದರಿಂದ ವಾದಿ ಮತ್ತು ಪ್ರತಿವಾದಿಯರ ಮಧ್ಯದಲ್ಲಿ ಗಡಿಗೆ ಸಂಬಂಧಪಟ್ಟಂತೆ ತಂಟೆ ತಕರಾರು ಉದ್ಭವಿಸಿದಲ್ಲಿ ಸರ್ವೇ ಇಲಾಖೆಗೆ ಅರ್ಜಿ ಸಲ್ಲಿಸಿ ತಮಗೆ ಇರತಕ್ಕಂಥಃ ಗಡಿಯನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ಆದರೆ ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿಗಳು ಮತ್ತು ಜಂಟಿ ಸ್ವಾಧೀನಾನುಭವದಲ್ಲಿದೆ ಎಂದು ಮೇಲ್ನೋಟಕ್ಕೆ ಕಂಡು ಬರುವುದಿಲ್ಲ. ಪ್ರತಿವಾದಿ ಹಾಜರಪಡಿಸಿದ ಮನೆಯ ಭಾವಚಿತ್ರಗಳನ್ನು ಪರಿಶೀಲಿಸಲಾಗಿ 1ನೇ ಪ್ರತಿವಾದಿಯ ಮನೆಯು ಮಕ್ತಾಯದ ಹಂತದಲ್ಲಿರುತ್ತದೆ. ವಾದಿಯರು 1ನೇ ಪ್ರತಿವಾದಿಯ ಮನೆ ಮುಕ್ತಾಯದ ಹಂತಕ್ಕೆ ಬರುವವರೆಗೂ ಪ್ರಶ್ನಿಸದೇ ಈ ಹಂತದಲ್ಲಿ 1ನೇ ಪ್ರತಿವಾದಿ ಕಟ್ಟಡ ಕಾಮಗಾರಿಯನ್ನು ಮುಂದುವರಿಸದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ಕೇಳಿದ್ದಾರೆ. ಆದರೆ ಆ ರೀತಿ ಆದೇಶ ನೀಡಿದಲ್ಲಿ ವಾದಿಯರಿಗಿಂತ 1ನೇ ಪ್ರತಿವಾದಿಗೆ ಹೆಚ್ಚು ತೊಂದರೆಯಾಗುತ್ತದೆ. 1ನೇ ಪ್ರತಿವಾದಿಯು ಸಾಕಷ್ಟು ಹಣ ತೊಡಗಿಸಿ ನಿರ್ಮಾಣ ಕಾರ್ಯದಲ್ಲಿದ್ದಾಗ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶ ನೀಡಿದಲ್ಲಿ 1ನೇ ಪ್ರತಿವಾದಿಗೆ ಹೆಚ್ಚು ತೊಂದರೆಯಾಗುತ್ತದೆ. ಆದ್ದರಿಂದ ದಾವಾ ಆಸ್ತಿಗಳಲ್ಲಿ 1ನೇ ಪ್ರತಿವಾದಿಗೂ ಹಕ್ಕು ಇರುವುದು ಭೂ ನ್ಯಾಯ ಮಂಡಳಿಯ ಆದೇಶದಲ್ಲಿ ಸ್ಪಷ್ಟವಾಗಿರುವುದರಿಂದ ಉಭಯ ಪಕ್ಷಗಾರರ ಸಾಕ್ಷಿ ವಿಚಾರಣೆಯ ನಂತರ ವಾದಿ ಮತ್ತು ಪ್ರತಿವಾದಿಯರ ಹಕ್ಕನ್ನು ನಿರ್ಣಯಿಸಲು ಅವಕಾಶ ಇರುವುದರಿಂದ ಈ ಹಂತದಲ್ಲಿ ವಾದಿಯರು ಮಧ್ಯಂತರ ಅರ್ಜಿಯಲ್ಲಿ ಕೇಳಿದ 4 ಪರಿಹಾರಗಳನ್ನು ಒಂದೇ ಅರ್ಜಿಯಲ್ಲಿ

ಕೇಳಿರುವುದು ಸಿವಿಲ್ ಪ್ರಕ್ರಿಯಾ ನಿಯಮಗಳಿಗೆ ವಿರುದ್ದವಾಗಿರುತ್ತದೆ. ಆದ್ದರಿಂದ ಮಧ್ಯಂತರ ಅರ್ಜಿಯಲ್ಲಿ ಕೇಳಿದ ಪರಿಹಾರಗಳು ವಾದಿಯರ ಪರವಾಗಿ ಮೆಲ್ನೋಟಕ್ಕೆ ಸಮ್ಮ್ತವೆಂದು ಕಂಡು ಬರುವುದಿಲ್ಲ. ಆದ್ದರಿಂದ **ಅಂಶ ನಂ 1 ರಿಂದ 3 ನ್ನು ನಕಾರಾತ್ಮಕವಾಗಿ** ಉತ್ತರಿಸಿದ್ದೇನೆ.

**20.** **ಅಂಶ-4:-** ಅಂಶ-1 ರಿಂದ 3ನ್ನು ಉತ್ತರಿಸಲು ನೀಡಿರುವ ಕಾರಣಗಳಿಂದ ಈ ಕೆಳಕಂಡಂತೆ ಮಾಡುವ

## ಆದೇಶ

**ಅರ್ಜಿದಾರರು/ವಾದಿಯರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2ರಡಿ ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಲಾಗಿದೆ.**

**ಖರ್ಚಿನ ಬಗ್ಗೆ ಯಾವುದೇ ಆದೇಶ ಇಲ್ಲ.**

(ಈ ಆದೇಶವನ್ನು ಶೀಘ್ರಲಿಪಿಗಾರ್ತಿಗೆ ನೇರವಾಗಿ ಗಣಕೀಕೃತ ಯಂತ್ರದ ಮೂಲಕ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿದ ನಂತರ ಅದು ನನ್ನಿಂದ ಪರಿಷ್ಕರಿಸಲ್ಪಟ್ಟಿದ್ದು ದಿನಾಂಕ **4.3.2017** ನೇ ಇಸವಿಯಂದು ಪರಿಷ್ಕರಿಸಲ್ಪಟ್ಟ ಆದೇಶವನ್ನು ಬಹಿರಂಗ ನ್ಯಾಯಾಲಯದಲ್ಲಿ ಓದಲಾಯಿತು.)

**(ಶಾರದಾದೇವಿ ಸಿ. ಹಟ್ಟಿ)**
**ಪ್ರಧಾನ ಸಿ.ಜೆ. ಮತ್ತು ಜೆಎಂಎಫ್‌ಸಿ.,**
**ಕುಮಟಾ**